ವರ್ಷದ ಆರು ತಿಂಗಳು ಇದ್ದ ಜಲ್ಲಿಕಲ್ಲಿನ ರಸ್ತೆಯೂ ಸಂಪೂರ್ಣ ಮುಳುಗಿಹೋಗಿ ಹೊರಜಗತ್ತಿನ ಸಂಪರ್ಕವೇ ಇರದೇ ಸಂಪೂರ್ಣ ದ್ವೀಪದಂತಾಗಿಬಿಡುತ್ತಿತ್ತು. ಆಗೆಲ್ಲ ಕಾಯಿಲೆ ಕಸಾಲೆಗೆಂದು ಸಾಗರಕ್ಕೋ ಶಿವಮೊಗ್ಗಕ್ಕೋ ಹೋಗಬೇಕೆಂದರೆ ಮೀನು ಹಿಡಿಯಲೆಂದು ಬೆಸ್ತರ ರಾಮಣ್ಣ ಬಳಸುತ್ತಿದ್ದ ತೆಪ್ಪವನ್ನೇ ಬಳಸಬೇಕಿತ್ತು. ಅದೂ ಆತ ಸತ್ತುಹೋದ ಮೇಲೆ ವಾರಸುದಾರರಿಲ್ಲದೆ ಅನಾಥವಾಗಿದ್ದ ಅದೇ ತೆಪ್ಪವನ್ನೇ ಆ ಕಡೆಗೆ ಹೋದವರು ಅತ್ತಲಾಗೂ, ಈ ಕಡೆ ಬಂದವರು ಇತ್ತಲಾಗೂ ಒಯ್ದು ಅಲೆಗೆ ತೇಲಿಹೋಗದಂತೆ ಲಂಗರಿನಂತೆ ಗೂಟ ಬಡಿದು ಅದಕ್ಕೆ ಹಗ್ಗದಿಂದ ಕಟ್ಟಿಹಾಕುತ್ತಿದ್ದರು. ಅವರು ಬರುವವರೆಗೆ ಇವರಿಗೂ, ಇವರು ಬರುವವರೆಗೆ ಅವರಿಗೂ ತೆಪ್ಪ ಸಿಗದೇ ಕೆಲವು ಸಲ ದಿನಗಟ್ಟಲೇ ಕಾಯಬೇಕಾಗುತ್ತಿತ್ತು...

ಇದರಿಂದ ರೋಸಿಹೋದ ಜನ ಇನ್ನೊಂದು ತೆಪ್ಪವನ್ನು ತರಲು ಮನಸ್ಸು ಮಾಡಿದರೂ ಹಣ ಕೂಡಿಸಲು ಯಾರೂ ಮುಂದೆ ಬರದೇ, ಆ ಆಸೆ ಕೈಗೂಡದೇ ಹಾಗೆಯೇ ಉಳಿದುಹೋಯ್ತು. ಇದ್ದ ಒಂದು ತೆಪ್ಪವನ್ನೇ ನಡೆಸಲು ಯಾರನ್ನಾದರೂ ನೇಮಿಸೋಣವೆಂದರೆ ಅದರಿಂದ ಬರುತ್ತಿದ್ದ ಫಾಯಿದೆ ಯಾವುದಕ್ಕೂ ಸಾಲದೇ ಯಾರೂ ಮುಂದೆ ಬರಲಿಲ್ಲ. ಇದು ನೀರಗಂಟಿಯೇ ಮಾಡಬೇಕಾದ ಕೆಲಸ ಎಂದು ಇದ್ದ ಒಂದು ಕುಟುಂಬವನ್ನು ಒತ್ತಾಯಿಸಿದರೂ ಮನಸ್ಸಿಲ್ಲದ ಮನಸ್ಸಿನಿಂದ ಅವರು ಕೆಲವು ದಿನ ಆ ಕೆಲಸ ಮಾಡಿದರೂ, ಊರ ಜನ ಕೊಡುವ ಸುಗ್ಗಿಯ ಒಂದೊಂದು ಹುಲ್ಲುಪೆಂಡಿಯಿಂದ ತನ್ನ ಸಂಸಾರ ಸಾಗದೆಂಬ ಭರಮಣ್ಣನ ಗೊಣಗಾಟಕ್ಕೆ ರೋಸಿ ಹೋಗಿದ್ದರು. ಬೆಳಗ್ಗೆ ಮಕ್ಕಳು ಶಾಲೆಗೆ ಹೋಗುವ ಸಮಯಕ್ಕೆ ಒಂದು ಬಾರಿ, ಸಂಜೆ ಬರುವ ಸಮಯಕ್ಕೆ ಮತ್ತೊಂದು ಬಾರಿ ಎಂದು ಕಾಲ ನಿಗದಿಪಡಿಸಿಕೊಂಡು ಜನ ಪೇಟೆ ಪಟ್ಟಣಕ್ಕೆ ಹೋಗಿಬರುವ ಕೆಲಸ ಮಾಡಲಾರಂಭಿಸಿದ್ದರು.

ಆದರೇನು? ಕ್ರಮೇಣ ಆ ತೆಪ್ಪದೊಳಗೂ ನೀರಿನ ಬುಗ್ಗೆಗಳು ಏಳಲಾರಂಭಿಸಿದವು. ಮುರಿದ ಬಿದಿರಿನ ಜಾಗಕ್ಕೆ ಗೋಣಿಚೀಲ ಹಾಕಿ ಹೊಲೆದರು. ತೇವಿಸಿಕೊಂಡು ಬರುತ್ತಿದ್ದ ನೀರನ್ನು ಆಚೆಗೆ ಹಾಕಲು ಚೊಂಬನ್ನೂ ಇಟ್ಟರು. ಇನ್ಯಾರೋ ಮಧ್ಯಾಹ್ನದ ಬಿಸಿಲಿಗೆ ಕಾದು ನೀರಂತಾಗಿರುತ್ತಿದ್ದ ರಸ್ತೆ ಮೇಲಿನ ಡಾಂಬರನ್ನು ಗೆಬರಿಕೊಂಡು ಬಂದು ತೇಪೆ ಹಾಕಿದರು. ಏನು ಮಾಡಿದರೂ, ನಾ ನಿಲ್ಲುವಳಲ್ಲ ಎಂಬಂತೆ ಗಂಗೆಯೆಂಬುವವಳು ನುಗ್ಗಿಕೊಂಡು ಬರುತ್ತಲೇ ಇದ್ದಳು.

ಹೀಗೇ ತೆವಳುತ್ತ ತೆವಳುತ್ತ ಎಷ್ಟೋ ವರ್ಷಗಳಾದ ಮೇಲೆ ಹೊಳೆಬಾಗಿಲಿಗೆ ಒಂದು ಲಾಂಚ್ ಬೋಟನ್ನು ಸರಕಾರ ಹೊಸದಾಗಿ ಪರಿಚಯಿಸಿತು. ಅದು ಹೇಗೆ ಹೋಗಿ ಬರುತ್ತದೆ ಎಂದು ನೋಡಲೆಂದೇ ಊರ ಜನ ಹೋಗಿ ಅದರೊಳಗೆ ಕೂತು ನಿಂತು ಅಡ್ಡಾಡಿ ಬಂದರು. ಎರಡೆರಡು ಗಂಟೆಗೆ ಒಮ್ಮೆ ಹೋಗಿಬರುತ್ತಿದ್ದ ಅದನ್ನು ನಂಬಿಕೊಂಡು ನಾಲ್ಕೈದು ಮೈಲಿ ದೂರ ಹಾಗೆ ದಂಡೆಗುಂಟ ನಡೆದುಹೋಗಿ, ಅಲ್ಲಿಂದ ಕಾಲು ದಾರಿಯಲ್ಲಿ ಇಲ್ಲಿಗೆ ಬಂದು... ಹೀಗೆ ಪಯಣದ ಹಾದಿ ದೂರವಾಗುತ್ತಲೇ ಹೋಯಿತು. ಕ್ರಮೇಣ ಅದರ ಮೇಲೆ ಸೈಕಲ್ಲುಗಳನ್ನು, ಬೈಕುಗಳನ್ನು ತುಂಬಲಾರಂಭಿಸಿದ ನಂತರ ಊರೊಳಗೆ ಒಂದೆರಡು ಬೈಕುಗಳು ಅಡ್ಡಾಡಲಾರಂಭಿಸಿದವು. ಮತ್ತೆ ಇನ್ನೊಂದಷ್ಟು ವರ್ಷಗಳ ನಂತರ ಮತ್ತೊಂದು ಹೊಸ ದೊಡ್ಡ ಲಾಂಚನ್ನು ತಂದು ಅದರ ಮೇಲೆ ಜೀಪು, ಕಾರುಗಳನ್ನು ಹೇರಲಾರಂಭಿಸಿದರು. ಇನ್ನೂ ದೊಡ್ಡ ಲಾಂಚು ಬಂದಾದ ಮೇಲೆ, ಅದರ ಮೇಲೆ ರೂಟ್‌ಬಸ್ಸುಗಳನ್ನೂ ತುಂಬಲಾರಂಭಿಸಿದರು.

ಹೀಗೆ ಹೊಸ ಲಾಂಚು ಬಂದಾದ ಮೇಲೆ ಹಳೆಯ ಲಾಂಚು ಹಾಗೇ ತೇಲಿ ಹೋಗಿ ಎರಡನೇ ಹೊಳೆಬಾಗಿಲಿನ ಸೇವೆಗೆ ಬಂದುನಿಂತಿತು. ಅದು ಅವಿನಾಶಿಗೆ ಇನ್ನಷ್ಟು ಸಮೀಪವಾದರೂ ಕಾಲಸರಿದಂತೆ ಜನರ ಓಡಾಟವೂ ಜಾಸ್ತಿಯಾಗಿ ಅದೂ ದೂರವೆನ್ನಿಸಲಾರಂಭಿಸಿತು. ಇತ್ತೀಚೆಗೆ ಮಳೆಗಾಲವೂ ಕಡಿಮೆಯಾದ್ದರಿಂದ ಕೇವಲ ನೂರು ಅಡಿಯಷ್ಟು ನಿಲ್ಲುತ್ತಿದ್ದ ನೀರನ್ನು ದಾಟಲು